ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1159
2.	ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3.	ಉತ್ತರಿಸುವ ಸಚಿವರು	:	ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು
4.	ಉತ್ತರಿಸುವ ದಿನಾಂಕA	:	23.12.2021.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಕಾನೂನು ಕಾಲೇಜುಗಳು ಸಂಖ್ಯೆ ಎಷ್ಟು; (ಪೂರ್ಣ ವಿವರ ನೀಡುವುದು)</td><td>ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಸರ್ಕಾರಿ ಕಾಲೇಜುಗಳು -06
ವಿಶ್ವವಿದ್ಯಾಲಯದ ಕಾನೂನು ಶಾಲೆ-1
ಸ್ವಾಯತ್ತ ಕಾಲೇಜು - 1
ಅನುದಾನಿತ ಕಾಲೇಜುಗಳು -27
ಅನುದಾನರಹಿತ ಕಾಲೇಜುಗಳು -76
ಒಟ್ಟು - 111 ಕಾಲೇಜುಗಳು
(ಅನುಬಂಧ-1 -ಸರ್ಕಾರಿ & ಅನುದಾನಿತ ಕಾನೂನು ಕಾಲೇಜುಗಳು ಮತ್ತು ಅನುಬಂಧ -2 ರಲ್ಲಿ ಅನುದಾನ ರಹಿತ ಕಾನೂನು ಕಾಲೇಜುಗಳ ವಿವರವನ್ನು ನೀಡಲಾಗಿದೆ.)</td></tr>
<tr><td>ಆ)</td><td>ಸದರಿ ಕಾಲೇಜುಗಳಲ್ಲಿ ಮಂಜೂರಾಗಿರುವ ಹಾಗೂ ಖಾಲಿ ಇರುವ ಬೋಧಕ / ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)</td><td>ಸರ್ಕಾರಿ ಕಾನೂನು ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿ ಮಂಜೂರಾಗಿರುವ ಹಾಗೂ ಖಾಲಿಯಿರುವ ಬೋಧಕ / ಬೋಧಕೇತರ ಹುದ್ದೆಗಳ ಜಿಲ್ಲಾವಾರು ವಿವರ ಈ ಕೆಳಕಂಡಂತೆ ನೀಡಲಾಗಿದೆ;
<table>
<tr><th rowspan="2">ಕ್ರ. ಸಂ. 1</th><th rowspan="2">ಜಿಲ್ಲೆ</th><th rowspan="2">ಸಕಾಕಾ ಸಂಖ್ಯೆ</th><th colspan="3">ಬೋಧಕರು</th><th colspan="3">ಬೋಧಕೇತರರು</th></tr>
<tr><th>San</th><th>Worg</th><th>Vac</th><th>San</th><th>Wokg</th><th>Vac</th></tr>
<tr><td>1</td><td>ಕೋಲಾರ</td><td>01</td><td>11</td><td>7</td><td>4</td><td>10</td><td>2</td><td>8</td></tr>
<tr><td>2</td><td>ರಾಮನಗರ</td><td>01</td><td>7</td><td>5</td><td>2</td><td>10</td><td>1</td><td>9</td></tr>
<tr><td>3</td><td>ಹಾಸನ</td><td>02</td><td>15</td><td>12</td><td>3</td><td>20</td><td>2</td><td>18</td></tr>
<tr><td>4</td><td>ಚಾಮರಾಜನಗರ</td><td>01</td><td>8</td><td>0</td><td>8</td><td>2</td><td>1</td><td>1</td></tr>
<tr><td>5</td><td>ಕಲಬುರಗಿ</td><td>01</td><td>5</td><td>2</td><td>3</td><td>7</td><td>3</td><td>4</td></tr>
<tr><td>6</td><td>ಹಾವೇರಿ</td><td>01</td><td>0</td><td>0</td><td>0</td><td>0</td><td>0</td><td>0</td></tr>
<tr><td>7</td><td>ವಿಶ್ವವಿದ್ಯಾಲಯದ ಕಾನೂನು ಶಾಲೆ</td><td>01</td><td>68</td><td>24</td><td>44</td><td>63</td><td>0</td><td>0</td></tr>
<tr><td></td><td>ಒಟ್ಟು</td><td>08</td><td>114</td><td>50</td><td>64</td><td>112</td><td>9</td><td>40</td></tr>
</table>
ಅನುದಾನಿತ ಕಾನೂನು ಕಾಲೇಜುಗಳಲ್ಲಿ ಮಂಜೂರಾಗಿರುವ 257-ಬೋಧಕ ಹಾಗೂ 387-ಬೋಧಕೇತರರ ಹುದ್ದೆಗಳಿದ್ದು, 92- ಬೋಧಕ ಹಾಗೂ 145-ಬೋಧಕೇತರರ ಹುದ್ದೆಗಳು ಖಾಲಿ ಇರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ).

ಅನುದಾನರಹಿತ ಕಾನೂನು ಕಾಲೇಜುಗಳಲ್ಲಿನ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಆಯಾ ಕಾಲೇಜುಗಳ ಆಡಳಿತ ಮಂಡಳಿಯೇ ನೇಮಕ ಮಾಡಿಕೊಳ್ಳುತ್ತವೆ.</td></tr>
</table>

..2

ಇ)	ಸದರಿ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು;	**ಸರ್ಕಾರಿ ಕಾನೂನು ಕಾಲೇಜು** ಸರ್ಕಾರಿ ಕಾನೂನು ಕಾಲೇಜುಗಳು ಒಳಗೊಂಡಂತೆ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಒಟ್ಟು 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ವಿಶೇಷ ನೇಮಕಾತಿ ನಿಯಮಾವಳಿಗಳನ್ನು ರಚಿಸಲಾಗಿದ್ದು, ಸದರಿ ವಿಶೇಷ ನೇಮಕಾತಿ ನಿಯಮಗಳನ್ವಯ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/257/ಡಿಸಿಇ/2019 (ಭಾಗ-3), ದಿನಾಂಕ: 15.07.2021 ರನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಸರ್ಕಾರ/ಇಲಾಖೆಗೆ ಸಲ್ಲಿಸಿದ ನಂತರ ನಿಯಮಾನುಸಾರ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು. ಬೋಧಕೇತರ ಹುದ್ದೆಗಳಲ್ಲಿ ನೇರ ನೇಮಕಾತಿಯಡಿ ಖಾಲಿ ಇರುವ ಹಾಗೂ ಸರ್ಕಾರವು ಅನುಮೋದನೆ ನೀಡಿರುವ 123 ಪ್ರಥಮ ದರ್ಜೆ ಸಹಾಯಕರು, 109 ದ್ವಿತೀಯ ದರ್ಜೆ ಸಹಾಯಕರು, 02 ಶೀಘ್ರಲಿಪಿಗಾರರು, 29 ಗ್ರಂಥಾಲಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದಾಗಿ. ಕರ್ನಾಟಕ ಲೋಕಸೇವಾ ಆಯೋಗವು ಅರ್ಹ ಅಭ್ಯರ್ಥಿಗಳ ಆಯ್ಕೆಪಟ್ಟಿಯನ್ನು ಇಲಾಖೆಗೆ ಸಲ್ಲಿಸಿದ ನಂತರ ನಿಯಮಾನುಸಾರ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು. **ಅನುದಾನಿತ ಕಾನೂನು ಕಾಲೇಜು** ಸರ್ಕಾರಿ ಆದೇಶ ಸಂ ಖ್ಯೆ: ಲಾ 81 ಕೆಎಲ್ ಎಂ 2009, ದಿನಾಂಕ: 28.11.2012 ರನ್ವಯ 19 ಖಾಸಗಿ ಕಾನೂನು ಕಾಲೇಜುಗಳಿಗೆ ವೇತನಾನುದಾನವನ್ನು ನೀಡಲು ಸರ್ಕಾರವು ಮಂಜೂರಾತಿ ನೀಡಿದೆ. ಅನುದಾನಿತ ಕಾನೂನು ಕಾಲೇಜುಗಳಲ್ಲಿ ಬೋಧಕರ ಖಾಲಿ ಹುದ್ದೆ ಭರ್ತಿಗೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖೆಯಿಂದ ಕಾಲಕಾಲಕ್ಕೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸರ್ಕಾರದ ಅನುಮತಿ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ. ವಿಶ್ವವಿದ್ಯಾಲಯದ ಕಾನೂನು ಶಾಲೆ ಯಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕಿಯೆಯು ಪ್ರಗತಿಯಲ್ಲಿದೆ.

ಈ)	ಸದರಿ ಕಾಲೇಜುಗಳಲ್ಲಿ ಇರುವ ಮೂಲಭೂತ ಸೌಲಭ್ಯಗಳ ಕೊರತೆಗಳಾವುವು;	<u>08-ಸರ್ಕಾರಿ ಕಾನೂನು ಕಾಲೇಜುಗಳ ಪೈಕಿ,</u> • ಕೋಲಾರ, ರಾಮನಗರ, ಹಾಸನ ಜಿಲ್ಲೆಗಳಲ್ಲಿರುವ 04 ಸರ್ಕಾರಿ ಕಾನೂನು ಕಾಲೇಜುಗಳು ಈಗಾಗಲೇ ಸ್ವಂತ ಕಟ್ಟಡ ಹೊಂದಿರುತ್ತದೆ. • ಕಲಬುರಗಿ ಜಿಲ್ಲೆಯ ಸರ್ಕಾರಿ ಕಾನೂನು ಕಾಲೇಜಿಗೆ ಇತ್ತೀಚೆಗೆ ಜಮೀನು ಮಂಜೂರಾಗಿದ್ದು, ಸದರಿ ಕಾಲೇಜಿನ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ 2015-16ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.200.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕಟ್ಟಡ ನಿರ್ಮಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ. • ಉಳಿದಂತೆ, ಚಾಮರಾಜನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸರ್ಕಾರಿ ಕಾನೂನು ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಆದರೆ, ಇದುವರೆವಿಗೂ ಕಾರ್ಯಾರಂಭವಾಗಿರುವುದಿಲ್ಲ.
ಉ)	ಸದರಿ ಕೊರತೆ ನೀಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳಾವುವು?	ಕೊರತೆ ಇರುವಂತಹ ಕೋಲಾರ ಕಾಲೇಜಿಗೆ 2018-19ನೇ ಸಾಲಿನಲ್ಲಿ ರೂ.210.00 ಲಕ್ಷಗಳು ಮತ್ತು ಹಾಸನ ಜಿಲ್ಲೆಗಳಲ್ಲಿರುವ ಸರ್ಕಾರಿ ಕಾನೂನು ಕಾಲೇಜುಗಳಿಗೆ ವಿವಿಧ ಕಾಮಗಾರಿಗಳಿಗೆ 2018-19 ಮತ್ತು 2020-21ನೇ ಸಾಲಿನಲ್ಲಿ ರೂ.200.00 ಲಕ್ಷಗಳ ಅನುದಾನ ಒದಗಿಸಿಕೊಂಡು ಕೊರತೆ ನೀಗಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ.

ಸಂಖ್ಯೆ: ಲಾ–ಹೆಚ್‌ಆರ್‌ಎಮ್/183/2021

(ಜೆ.ಸಿ. ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು